**OS. No 19/2019**

**P.W-1**

**( ದಿನಾಂಕ.11-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ. S.S.C. ವಕೀಲರಿಂದ

ಈ ದಾವೆ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ತಂದೆ ದಾವಾ ಸ್ವತ್ತನ್ನು ಖರೀದಿಸುವ ಮುಂಚೆ ಅದು ಯಾರಿಗೆ ಸಂಬಂಧಪಟ್ಟಿದ್ದು ಇರುತ್ತದೆ ಎಂದು ಕೂಲಂಕೂಷವಾಗಿ ಪರಿಶೀಲಿಸಿ ನನ್ನ ತಂದೆ ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತಿನ ಸರ್ವೇ ನಂಬರ 27 ಇರುತ್ತದೆ. ದಾವಾ ಸ್ವತ್ತಿನ ಸರ್ವೇ ನಂಬರ 27 ರ ಪೂರ್ಣ ಮಾಲೀಕರು ಮುಲ್ಲಾರವರು ಇರುತ್ತಾರೆಂದರೆ ಸರಿ. ದಾವಾ ಸರ್ವೆ ನಂಬರ 27 ಒಟ್ಟು ಎಷ್ಟು ಎಕರೆ ಇರುತ್ತದೆ ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿ ಸುಮಾರು 40 ವರ್ಷ ಆಗಿರುತ್ತದೆ. ನನ್ನ ತಂದೆ ಗುಡುಮಾಬೀ ಎಂಬುವವರಿಂದ ಖರೀದೆಸಿರುತ್ತಾರೆ. ಖರೀದಿ ಕಾಲಕ್ಕೆ ನನಗೆ ತಿಳುವಳಿಕೆ ಇತ್ತು ಎಂದರೆ ಸರಿ. ಖರೀದಿ ಕಾಲಕ್ಕೆ ನನ್ನ ತಂದೆ ಅಳತೆ ಮಾಡಿ ತೆಗೆದುಕೊಂಡಿರುತ್ತಾರೊ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಖರೀದಿ ಆದ ನಂತರ ನನ್ನ ತಂದೆ ಹೆಸರಿನಲ್ಲಿ ಆದ ಪಹಣಿಗಳನ್ನು ಮತ್ತು ಖರೀದಿ ಪತ್ರವನ್ನು ನಾನು ಪರಿಶೀಲಿಸಿರುತ್ತೇನೆ.

ನನ್ನ ತಂದೆ ಖರೀದಿ ಮಾಡಿದ ಕ್ರಯಪತ್ರದ ಬಗ್ಗೆ ಸುಮಾರು 20 ವರ್ಷಗಳಿಂದ ನನಗೆ ಗೊತ್ತಿರುತ್ತದೆ.

ನನ್ನ ತಂದೆಯ ಮಾರಾಟಗಾರರಾದ ಗುಡುಮಾಬೀ ಅವರ ಹೆಸರು ಪಹಣಿಯಲ್ಲಿ ಇದ್ದುದ್ದನ್ನು ನಾನು ನೋಡಿರುತ್ತೇನೆ.

**OS. No 19/2019**
**P.W-1**

ಸದರಿ ಪಹಣಿ 4 ಎಕರೆ 18 ಗುಂಟೆ ಇತ್ತು. 4 ಎಕರೆ 18 ಗುಂಟೆ ಗುಡುಮಾಬೀ ಹೆಸರಿನಲ್ಲಿ ಇದ್ದುದು ಎಷ್ಟು ವರ್ಷಗಳಿಂದ ಗೊತ್ತಿತ್ತು ಎಂದರೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರ ಕ್ರಯಪತ್ರದಲ್ಲಿ 4 ಎಕರೆ 18 ಗುಂಟೆ ಇರುವುದು ನನಗೆ 10-15 ವರ್ಷಗಳಿಂದ ಮುಂಚೆನೆ ಗೊತ್ತಾಗಿರುತ್ತದೆ. ಆ ಸಮಯದಲ್ಲಿ ಗುಡುಮಾಬೀ ಹೆಸರಿನಲ್ಲಿ ಎಷ್ಟು ಎಕರೆ ಇತ್ತು ನನಗೆ ಮಾಹಿತಿ ಇಲ್ಲ. ಸುಮಾರು 8-10 ವರ್ಷಗಳ ಹಿಂದೆ ಅಂದರೆ ದಾವಾ ಮಾಡುವ ಪೂರ್ದವಲ್ಲಿ ಗುಡುಮಾಬೀ ಹೆಸರಿನಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಇತ್ತು ಎಂದು ಹಾಗೂ ನಿಪಿ-2 ರಲ್ಲಿ ಎಷ್ಟು ಎಕರೆ ಇತ್ತು ಎಂದು ನಾನು ತಿಳಿದುಕೊಂಡಿಲ್ಲ.

ಗುಡುಮಾಬೀ ಹೆಸರಿನಲ್ಲಿ 2 ಎಕರೆ 18 ಗುಂಟೆ ಜಮೀನು ಮಾತ್ರ ಇತ್ತು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು 4 ಎಕರೆ 18 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಗುಡುಮಾಬೀ 2 ಎಕರೆ 18 ಗುಂಟೆಗಳಿಗೆ ಮಾತ್ರ ಮಾಲೀಕಳು ಇದ್ದು, 4 ಎಕರೆ 18 ಗುಂಟೆಯನ್ನು ಮಾರಾಟ ಮಾಡಲು ಅವಳಿಗೆ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಾವು ಯಾವತ್ತು ಗುಡುಮಾಬೀ ಹೆಸರಿನಲ್ಲಿ 2 ಎಕರೆ 18 ಗುಂಟೆ ಇದೆ ಎಂದು ತಹಶೀಲ್ದಾರ ಮತ್ತು AC ಬಳಿಯಲ್ಲಿ ಯಾವುದೇ ಅರ್ಜಿ ಸಲ್ಲಿಸಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
ಆಳಂದ